ಎಷ್ಟಾಗಿರಬಹುದು? ಸುಮಾರು ಅರವತ್ತೆಂಟರ ಆಚೆ ಈಚೆ... ಇಂದಿನ ಕಾಲದಲ್ಲಿ ಅರವತ್ತೆರಡರ ವಯಸ್ಸು, ಏನೂ ಅಲ್ಲ. ಅಲ್ಲದೆ, ಲಾರಾರಿಗೆ ಯಾವ ಕಾಯಿಲೆ ಸಹ ಇರಲಿಲ್ಲ. ಅವರು ಗಟ್ಟಿಮುಟ್ಟಾದ ಮಹಿಳೆಯಾಗಿದ್ದರು. ಅವರಿಗೆ ರಕ್ತದೊತ್ತಡ ಇರಲಿಲ್ಲ, ಸಕ್ಕರೆ ಕಾಯಿಲೆ ಸಹ ಇರಲಿಲ್ಲ. ಅವರು ನಿಯಮಿತವಾಗಿ ವ್ಯಾಯಾಮ ವನ್ನು ಮಾಡುತ್ತಿದ್ದರು. ಪೌಷ್ಟಿಕ ಆಹಾರವನ್ನು ಸೇವಿಸುತ್ತಿದ್ದರು. ಅಲ್ಲದೆ ತಮ್ಮ ನಿಯಮಿತ ಚೆಕ್‌ಅಪ್‌ಗಾಗಿ ವೈದ್ಯರ ಬಳಿಗೆ ಹೋಗುತ್ತಿದ್ದರು.

ನಾನು ಲಾರಾರನ್ನು ನೋಡಲು ಆಸ್ಪತ್ರೆಗೆ ಹೋದೆ. ಅವರು ಐಸಿಯುನಲ್ಲಿ ಪ್ರಜ್ಞೆ ಕಳೆದು ಕೊಂಡು ಮಲಗಿದ್ದರು. ನನಗೆ ಗಾಜಿನ ಕಿಟಕಿ ಯಿಂದ ಮಾತ್ರ ನೋಡಲು ಅನುಮತಿ ಲಭಿಸಿತು. ಚಿಕಿತ್ಸಾ ಉಪಕರಣಗಳ ನಡುವೆ ಒಂದು ಮೌನ ಶರೀರ. ನನ್ನ ಮನಸ್ಸು ಅವರ ಬಗ್ಗೆ ಅಪಾರ ಕರುಣೆಯಿಂದ ತುಂಬಿತು. ನಾನು ಏಸುವಿನಲ್ಲಿ ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಿದೆ.

ಫಿಲಿಪ್ ಅಲ್ಲಿದ್ದು, ಐಸಿಯು ಹೊರಗೆ ಕಾರಿಡಾರ್‌ನಲ್ಲಿ ಅಡ್ಡಾಡುತ್ತಿದ್ದರು. ಅವರು ನನಗೆ, ಲಾರ್ಸ್ ತನ್ನ ತಾಯಿಯನ್ನು ನೋಡಲೂ ಬರಲಿಲ್ಲ, ಆದರೆ ಅವನ ತಂದೆ ಡೇನಿಯಲ್ ಆಸ್ಪತ್ರೆಗೆ ಅನೇಕ ಬಾರಿ ಬಂದಿದ್ದಾರೆ ಎಂದರು.

'ನಾನು ನಾಳೆ ಲಾರ್ಸ್‌ನ ಮನೆಗೆ ಹೋಗುತ್ತಿದ್ದೇನೆ... ನನ್ನ ಲಗ್ಗೇಜುಗಳನ್ನು ತರಲು' ನಾನು ಫಿಲಿಪ್‌ಗೆ ಹೇಳಿದೆ.

'ನಿನ್ನ ತಾಯಿಯ ಆರೋಗ್ಯ ಸರಿಯಿಲ್ಲವೆಂದು ನಾವು ಅವನಿಗೆ ಹೇಳಿದ್ದೇವೆ; ನೀನೂ ನಿನ್ನ ಪರವಾಗಿ ಅವನಿಗೆ ಹೇಳು' ಎಂದರು ಫಿಲಿಪ್.

ನಾನು ಆಗಲೆಂದು ತಲೆಯಾಡಿಸಿದೆ.

'ನಾನು ಅವಳ ಮನೆಯಿಂದ ನನ್ನ ವಸ್ತುಗಳನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಅವಳು ನನಗೆ ನಾಲ್ಕು ದಿನಗಳ ಕಾಲಾವಕಾಶ ಕೊಟ್ಟಿದ್ದಳು. ನನ್ನ ಐವತ್ತನೆಯ ಹುಟ್ಟುಹಬ್ಬದಂದು ಅತಿಥಿಗಳೆದುರು ನಿಂತು ಅವಳು, 'ನಾನು ಮತ್ತು ಪಾಲ್ ಬೇರೆಯಾಗುತ್ತಿದ್ದೇವೆ...' ಎಂದು ಘೋಷಿಸಿದ್ದಳು' ಎಂದ ಪಾಲ್.

'ಏನು ಹೇಳಿದಿರಿ ಪಾಲ್? ನಿಮ್ಮ ಐವತ್ತನೆಯ ಹುಟ್ಟುಹಬ್ಬದಂದು ನಿಮ್ಮ ನೀನಾ ಎಲ್ಲರೆದುರು, ನಿಮ್ಮನ್ನು ಬಿಡುತ್ತಿರುವ ಬಗ್ಗೆ ಹೇಳಿದಳೇ? ಅವಳು ಅದೆಷ್ಟು ನಿರ್ದಯಿಯಾಗಿದ್ದಳು...!'

'ಅವಳು ಈ ಇಹಲೋಕವನ್ನೇ ತ್ಯಜಿಸಿ ಹೋಗಿದ್ದಾಳೆ. ನಾವು ಈಗ ಅವಳ ಬಗ್ಗೆ ಅಸಂಬದ್ಧವಾಗಿ ಹರಟಬಾರದು' ಎಂದ ಪಾಲ್.

'ನೀವು ನೀನಾಳನ್ನು ತುಂಬಾ ಪ್ರೀತಿಸುತ್ತಿದ್ದಿರಿ ಎಂದು ತೋರುತ್ತೆ...'

'ನಿಮ್ಮ ಕಥೆಯನ್ನು ಹೇಳಿ...'

ನಾನು ಆ ಮನೆಯಲ್ಲಿ ಸುಮಾರು ಎಂಟು ವರ್ಷ ಇದ್ದೆ. ನಾನು ಅದೆಷ್ಟೋ ಬಾರಿ ಆ ಮನೆಯ ಬಾಗಿಲನ್ನು ತೆರೆದಿದ್ದೆ, ಮುಚ್ಚಿದ್ದೆ. ಇಂದು ನಾನು ಅಪರಿಚಿತಳಂತೆ ಆ ಮನೆಯ ಕಾಲಿಂಗ್ ಬೆಲ್ ಒತ್ತಿದ್ದೆ. ಮನಸ್ಸಿನಲ್ಲಿ ಅವನು ಹೇಗೆ ವರ್ತಿಸುವನೋ ಎಂಬ ದುಗುಡವಿತ್ತು. ನನ್ನನ್ನು ಹೊಡೆಯಲು ಮುಂದೆ ಬರುವುದಿಲ್ಲ ತಾನೇ! ಬಾಗಿಲನ್ನು ತೆರೆಯುವನೋ ಇಲ್ಲವೋ! ನಾನು ತಾಳ್ಮೆಯನ್ನು ಕಳೆದುಕೊಂಡು ಎಲ್ಲಾ ಮನೆಗಳ ಬಾಲ್ಕನಿಗಳನ್ನು ನೋಡಿದೆ. ಒಂದು ಕ್ಷಣ, ನಾನೆಂದೂ ಅಲ್ಲಿಂದ ಹೋಗೇ ಇಲ್ಲ ಎಂದು ಎನ್ನಿಸಿತು.

ನನಗೆ ಒಳಗಿನಿಂದ ಬಾಗಿಲ ಬಳಿಗೆ ಬರುವ ಅವನ ಕಾಲ ಸಪ್ಪಳ ಕೇಳಿಸಿತು, ಮರುಕ್ಷಣವೇ ಬಾಗಿಲು ತೆರೆದುಕೊಂಡಿತು. ಲಾರ್ಸ್ ಎದುರು ನಿಂತಿದ್ದ, ಅವನು ತುಂಬಾ ಸೊರಗಿದ್ದ, ಹೊಟ್ಟೆ ಒಳಗೆ ಹೋಗಿತ್ತು, ಗಲ್ಲಗಳು ಅಂಟಿಕೊಂಡಿದ್ದವು. ತಲೆಯ ಕೂದಲುಗಳು ಸಾಕಷ್ಟು ಉದುರಿದ್ದವು. ಉಳಿದ ಕೂದಲುಗಳು ಬೆಳ್ಳಗಾಗಿದ್ದವು. ಅವನು ವೃದ್ಧನಂತೆ ತೋರುತ್ತಿದ್ದ.

ನನ್ನನ್ನು ನೋಡಿ ಸ್ವಲ್ಪ ಗಾಬರಿಯಾದ.

'ನ್ಯಾನ್ಸಿ! ಕಮ್ ಇಂಡನ್‌ಫಾರ್' ಅವನು ನನಗೆ ಒಳಬರಲು ಆಮಂತ್ರಿಸಿದ.

ನಾನು ಒಳಗೆ ಹೋದೆ. ಅದೇ ಮನೆ, ಆದರೆ ಎಲ್ಲವೂ ಬದಲಾಗಿತ್ತು. ಅವನ ಜೀವನ ಒಂದು ಕೋಣೆಗೆ ಮಾತ್ರ ಸೀಮಿತವಾದಂತಿತ್ತು. ಎಲ್ಲವೂ ಡ್ರಾಯಿಂಗ್ ರೂಮಿನಲ್ಲಿದ್ದವು. ಟಿ.ವಿ. ಎದುರು ಹಾಸಿಗೆಯನ್ನು ಹಾಸಲಾಗಿತ್ತು, ಮೇಜಿನ ಮೇಲೆ ಕೋಕ್, ಮದ್ಯದ ಬಾಟ್ಲಿಗಳು ಮತ್ತು ಗ್ಲಾಸ್‌ಗಳಿದ್ದವು. ಅವನ ಬಟ್ಟೆಗಳು ಅಲ್ಲಲ್ಲಿ ಬಿದ್ದಿದ್ದವು. ಒಪ್ಪ ಓರಣ ಎಲ್ಲಾ ಕಣ್ಮರೆಯಾಗಿತ್ತು. ಕಿಡಕಿಗಳ ಪರದೆಗಳು ತೆರೆದಿದ್ದವು. ನಾನು ಬೆಳೆಸಿದ ಗಿಡಗಳು ಒಣಗಿದ್ದವು. ಮನೆಯಲ್ಲಿ ದುರ್ಗಂಧ ಸೂಸುತ್ತಿತ್ತು, ಅಲ್ಲಿ ಅಂಧಕಾರವಿದ್ದಂತಿತ್ತು. ನಾನು ಪರದೆಯನ್ನು ಹಾಕಲು ಹೋದೆ, ಆಗಲೇ ಅವನು ಬಂದು ತಡೆದ.

'ಲಾರ್ಸ್, ನಿಮ್ಮ ಮನೆಯ ಸ್ಥಿತಿ ಹೀಗೇಕಾಗಿದೆ? ಈ ಒಣಗಿದ ಗಿಡಗಳನ್ನು ಎಸೆಯಬೇಕಿತ್ತು' ನಾನು ಒಣಗಿದ ಗಿಡವನ್ನು ಎತ್ತಿ ಎಸೆಯಲು ಹೋದೆ, ಆದರೆ ಅವನು ಮತ್ತೆ ಬಂದು ತಡೆದ.

'ಏಕೆ ಬಂದಿದ್ದೀಯ?'

'ನೀವು ನನ್ನ ಇಮೇಲಿಗೆ ಉತ್ತರಿಸಲಿಲ್ಲ?' ನಾನು ಮರು ಪ್ರಶ್ನಿಸಿದೆ. ಅವನು ಮೌನವಾಗಿದ್ದ.

'ನಿಮ್ಮ ಸಿಗ್ನೇಚರ್ ತೆಗೆದುಕೊಳ್ಳಲು ಬಂದಿದ್ದೇನೆ...' ಎಂದು ನನ್ನ ಬ್ಯಾಗಿನಿಂದ ಕಾಗದಪತ್ರಗಳನ್ನು ಹೊರ ತೆಗೆದು ಅವನ ಎದುರಿಗೆ ಹಿಡಿದೆ.

'ವಿಚ್ಛೇದನದ ಪೇಪರ್ಸ್...'

'ವಿಚ್ಛೇದನ...' ಅವನ ಬಾಯಿಂದ ಹೊರಟಿತು. ಅವನು ಒಂದು ಕ್ಷಣ ನನ್ನನ್ನು ನೋಡಿದ, ನಂತರ ನಾನು ತೋರಿಸಿದ ಜಾಗದಲ್ಲಿ ಮೌನವಾಗಿ ಸಹಿ ಮಾಡಿದ.

ಅವನು ಸಹಿ ಮಾಡಿದ ಪತ್ರಗಳನ್ನು ತೆಗೆದುಕೊಂಡು ಹೇಳಿದೆ, 'ನನ್ನ ಕೆಲವು ಲಗ್ಗೇಜುಗಳಿರಬೇಕು...?'

'ಎಲ್ಲಾ ಆ ಕೋಣೆಯಲ್ಲಿದೆ', ಅವನು ಇನ್ನೊಂದು ಕೋಣೆಯೆಡೆಗೆ ಸಂಜ್ಞೆ ಮಾಡಿದ.

ನಾನು ಆ ಕೋಣೆಯ ಬಳಿಗೆ ಹೋದೆ. ಕೋಣೆ ಹೊರಗಿನಿಂದ ಮುಚ್ಚಿತ್ತು. ಬಾಗಿಲನ್ನು ತಳ್ಳಿದೆ, ಆ ಕೋಣೆ ಸುಮಾರಾಗಿ ಖಾಲಿಯಿತ್ತು. ಅಲ್ಲಿದ್ದ ನನ್ನ ವಸ್ತುಗಳನ್ನು ತೆಗೆದುಕೊಂಡು ಹೊರಟೆ.

'ಸರಿ ಲಾರ್ಸ್, ಥ್ಯಾಂಕ್ಸ್'

'ವೆಲ್‌ಕಮ್' ಎಂದ ಲಾರ್ಸ್.

ಅವನು ನನ್ನನ್ನು ಬಾಗಿಲವರೆಗೆ ಬಿಡಲು ಬಂದ.

ನನ್ನಿಂದ ತಡೆದುಕೊಳ್ಳಲಾಗದೆ ಹೇಳಿದೆ, 'ಲಾರ್ಸ್, ನಿಮ್ಮ ತಾಯಿಯ ಆರೋಗ್ಯ ತುಂಬಾ ಬಿಗಡಾಯಿಸಿದೆ. ಅವರು ರಿಗ್ಸ್ ಆಸ್ಪತ್ರೆಯಲ್ಲಿ ಐಸಿಯುನಲ್ಲಿದ್ದಾರೆ. ಅವರಿಗೆ ಬ್ರೈನ್ ಸರ್ಜರಿಯಾಗಿದೆ.'

ತನಗೆಲ್ಲಾ ವಿಷಯ ತಿಳಿದಿದೆ ಎಂದು ಲಾರ್ಸ್ ತಲೆಯಾಡಿಸಿದ.

'ಲಾರ್ಸ್, ನೀವು ನಿಮ್ಮ ತಾಯಿಯನ್ನು ನೋಡಲು ಖಂಡಿತ ಹೋಗಿ, ಅವರು ಬದುಕುತ್ತಾರೋ, ಇಲ್ಲವೋ ಗೊತ್ತಿಲ್ಲ'.

ಅವನು ಕರುಣೆಯ ಭಾವನೆಯಿಂದ ಮುಗುಳ್ನಕ್ಕ. ನೀನು ಚಿಂತಿಸಬೇಡವೆಂದು ಕೈಯಾಡಿಸುತ್ತಾ ನನಗೆ ಸಂಜ್ಞೆ ಮಾಡಿದ. ನಂತರ ಶೀಘ್ರವಾಗಿ ಹೇಳಿದ, 'ಫೇರ್‌ವೆಲ್'!

ಅವನು ನನ್ನೊಂದಿಗೆ ಮಾತುಕತೆ ನಡೆಸಲು ಬಯಸುತ್ತಿರಲಿಲ್ಲ. ನಾನು ಲಿಫ್ಟ್ ಸಮೀಪಕ್ಕೆ ಹೋದೆ. ಅವನ ದರಿದ್ರಾವಸ್ಥೆಯನ್ನು ನೋಡಿ ನನಗೆ ದುಃಖವಾಗುತ್ತಿತ್ತು. ಗಲ್ಲಿಯಲ್ಲಿ ಪಕ್ಕದ ಮನೆಯಲ್ಲಿದ್ದ ಸುಫಾನ್–ಲೀ ಭೇಟಿಯಾದಳು. ಲಾರ್ಸ್ ನನಗೆ ಹೊಡೆಯುವಾಗ ಅವಳೇ ನನ್ನನ್ನು ಅವನಿಂದ ಪಾರು ಮಾಡುತ್ತಿದ್ದಳು.

ನಾವು ಪರಸ್ಪರ ತಬ್ಬಿಕೊಂಡೆವು. ಪರಸ್ಪರ ಕ್ಷೇಮಸಮಾಚಾರವನ್ನು ವಿಚಾರಿಸಿದೆವು. ಸುಫಾನ್–ಲೀ ನನಗೆ ಲಾರ್ಸ್ ಬಗ್ಗೆ, 'ಅವನು ಸಾಮಾನ್ಯ ಮನುಷ್ಯನಂತಿಲ್ಲ, ಸೈಕೋ ಆಗಿದ್ದಾನೆ. ಅವನಿಗೆ ಕಮ್ಯೂನ್‌ನ ಹೆಲ್ಪ್ ಬರುತ್ತೆ, ಮನೆಯ ಕೆಲಸಗಳನ್ನು ಮಾಡಲು ಯೆಮಯೆಲ್ಪರ್ (ಹೋಮ್ ಹೆಲ್ಪರ್) ಬರ್ತಾಳೆ. ಔಷಧಿಗಳನ್ನು ಕೊಡಲು ನರ್ಸ್ ಸಹ ಬರ್ತಾಳೆ, ಆದರೆ ಅವನು ಅವರಿಗೆ ಬಾಗಿಲನ್ನೇ ತೆರೆಯಲ್ಲ' ಎಂದರು.

'ಆದರೆ ಅವನು ನನಗೆ ತಕ್ಷಣ ಬಾಗಿಲನ್ನು ತೆರೆದ' ಎಂದೆ ನಾನು.

ಸುಫಾನ್–ಲೀಗೆ ತುಂಬಾ ಆಶ್ಚರ್ಯವಾಯಿತು.

ಲಾರ್ಸ್‌ನ ಅವಸ್ಥೆಯನ್ನು ನೋಡಿ ಹಾಗೂ ಸುಫಾನ್–ಲೀಯಿಂದ ಎಲ್ಲವನ್ನೂ ಕೇಳಿ ನನಗೆ ಅವನ ಬಗ್ಗೆ ತುಂಬಾ ಕನಿಕರ ಮೂಡಿತು. ಅವನಿಗೆ ನನ್ನ ಅವಶ್ಯಕತೆ ತುಂಬಾ ಇದೆ ಎಂದು ಏಕೆ ಅನ್ನಿಸಿತೋ ತಿಳಿಯದು. ಆದರೆ ನಾನೇನು ತಾನೇ ಮಾಡಲಿ? ನನ್ನ ಸಂಬಂಧವನ್ನೇ ಕಡಿದುಕೊಂಡಾದ ನಂತರ, ನೀನೇನಾದರೂ ನನಗೇನು! ಎಂದು ಹೇಳಿಕೊಂಡೆ.

ಜೀವನದ ಈ ಏರಿಳಿತದ ನಡುವೆ, 'ಇಪ್ಪತ್ತೊಂದು ದಿನ ಕೋಮಾದಲ್ಲಿದ್ದ ಲಾರಾ ಇಹಲೋಕವನ್ನು ತ್ಯಜಿಸಿದಳು' ಎಂದು ಫಿಲಿಪ್‌ರ ಫೋನ್ ಬಂತು.

'ಓಹ್ ನೋ...' ನಾನು ಅಪ್ಪನ ನಂತರ ಲಾರಾರನ್ನು ಕಳೆದುಕೊಂಡೆ... ಮನಸ್ಸಿನಲ್ಲಿ ಕೋಲಾಹಲ ವ್ಯಾಪಿಸಿತು. ನಾನು ಗಟ್ಟಿಯಾಗಿ ರೋದಿಸಿದೆ.

'ಅಳಬೇಡ. ಎಲ್ಲವೂ ಒಳಿತಿಗಾಗಿಯೇ